# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 839 |
| 2 | ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 13-07-2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದ ಕೃಷ್ಣಪ್ಪ ಲೇಔಟ್‌ನಲ್ಲಿ ಮುನೇಶ್ವರ ನಗರ ರಸ್ತೆಯ ಒಂದನೇ ಕ್ರಾಸ್‌ನಲ್ಲಿ (ಹೊಸಕೆರೆಹಳ್ಳಿ ಮುಖ್ಯ ರಸ್ತೆ 43ಜೆ ಬಸ್ ನಿಲ್ದಾಣದ ಬಳಿ) ಇರುವ ಶ್ರೀ ಸಾಯಿ ಗಣೇಶ್ ಎಂಟರ್ ಪ್ರೈಸಸ್ ಸಂಸ್ಥೆ ಯಾವ ಕಾರ್ಯಗಳಿಗಾಗಿ ಸರ್ಕಾರದಿಂದ ಅನುಮತಿ ಪಡೆದಿದೆ; (ವಿವರ ಒದಗಿಸುವುದು) | ಯಾವುದೇ ಅನುಮತಿ ನೀಡಿರುವುದಿಲ್ಲ. |
| ಆ | ಸದರಿ ಸಂಸ್ಥೆ ಸ್ಥಳದಲ್ಲಿ ಯಾವ ಯಾವ ಕಾರ್ಯಗಳು ನಡೆಸುತ್ತಿದೆ; ಈ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಸದರಿ ಸ್ಥಳದಲ್ಲಿ ಗುಜರಿ ಅಂಗಡಿ ಹಾಗೂ ಶ್ರೀ ಸಾಯಿ ಗಣೇಶ್ ಎಂಟರ್ ಪ್ರೈಸಸ್ ರವರ ಮಿಕ್ಸ್‌ಚರ್ ಅಂಗಡಿ ನಡೆಯುತ್ತಿರುತ್ತದೆ. ಸದರಿ ಅಂಗಡಿಯವರು ಪರವಾನಗಿ ಪಡೆಯದಿರುವುದು ತಪಾಸಣೆ ಸಮಯದಲ್ಲಿ ಕಂಡು ಬಂದಿರುವುದರಿಂದ ತುರ್ತಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ, ಪರವಾನಗಿ ಪಡೆಯುವಂತೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಹಾಗೂ ಪರವಾನಗಿ ಪಡೆಯುವವರೆಗೆ ಸದರಿ ಉದ್ದಿಮೆಯನ್ನು ಸ್ಥಗಿತಗೊಳಿಸುವಂತೆ ಸೂಚಿಸಲಾಗಿರುತ್ತದೆ. |
| ಇ | ಸದರಿ ಸಂಸ್ಥೆಯ ಹೊಗೆ ಕೊಳವೆಯಿಂದ ವಿಪರೀತ ಮಾಲಿನ್ಯ ಉಂಟಾಗುತ್ತಿದ್ದು, ಇದರಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗಿ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ; | ಮೇಲ್ನೋಟಕ್ಕೆ ವಾಯುಮಾಲಿನ್ಯ ಕಂಡು ಬಂದಿರುವುದಿಲ್ಲ. ಆದಾಗ್ಯೂ ವಾಯು ಮಾಲಿನ್ಯದ ಬಗ್ಗೆ ತುರ್ತಾಗಿ ತಾಂತ್ರಿಕ ವರದಿ ನೀಡುವಂತೆ ಕೋರಿ, ದಿನಾಂಕ: 06-07-2023 ರಂದು ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಂಗಳೂರು ಇವರಿಗೆ ಪತ್ರವನ್ನು ಬರೆಯಲಾಗಿರುತ್ತದೆ. |
| ಈ | ಸದರಿ ಸಂಸ್ಥೆಯ ಕಾಂಪೌಂಡ್ ಗೋಡೆ ಒಡೆದು ಕೊಳಚೆಯನ್ನು ಮಳೆ ನೀರಿನ ಚರಂಡಿ ಹಾಗೂ ರಸ್ತೆ ಬಿಡುತ್ತಿರುವುದು ನಿಜವೇ; ಹೌದಾದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; | ಶ್ರೀ ಸಾಯಿ ಗಣೇಶ್ ಎಂಟರ್ ಪ್ರೈಸಸ್ ಸಂಸ್ಥೆಯ ಕಾಂಪೌಂಡ್ ಗೋಡೆ ಒಡೆದು ಕೊಳಚೆಯನ್ನು ರಸ್ತೆ ಪಕ್ಕದ ಮಳೆ ನೀರಿನ ಚರಂಡಿಗೆ ಬಿಟ್ಟಿರುವುದು ತಿಳಿದು ಬಂದಿರುತ್ತದೆ. ಅದರಂತೆ, ಸದರಿಯವರಿಗೆ ಈ ಕೊಳಚೆ ನೀರನ್ನು ಬಿ.ಡಬ್ಲ್ಯೂಎಸ್.ಎಸ್.ಬಿ ಮಂಡಳಿಯ ಒಳಚರಂಡಿಗೆ ಸಂಪರ್ಕ ಕಲ್ಪಿಸಲು ಒಂದು ವಾರ ಕಾಲಾವಕಾಶ ನೀಡಲಾಗಿದೆ. |

...2..

| | | |
|---|---|---|
| ಉ | ಸದರಿ ಸಂಸ್ಥೆಯು ಬಿಬಿಎಂಪಿ ಕಾಮಗಾರಿಗಳನ್ನು ಒಡೆದು ಹಾಕಿ ತನ್ನ ಸಂಸ್ಥೆಗೆ ಅಕ್ರಮವಾಗಿ ಅನುಕೂಲ ಮಾಡಿಕೊಳ್ಳುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಸದರಿ ಸಂಸ್ಥೆಯವರಿಗೆ ಕೊಳಚೆ ನೀರನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಮಂಡಳಿಯ ಒಳಚರಂಡಿಗೆ ಸಂಪರ್ಕ ಮಾಡಲು ಒಂದು ವಾರ ಕಾಲಾವಕಾಶ ತಿಳಿಸಿ ನೋಟೀಸ್ ಜಾರಿ ಮಾಡಲಾಗಿರುತ್ತದೆ ಮತ್ತು ಈ ಕೊಳಚೆ ನೀರನ್ನು ಚರಂಡಿಗೆ ಬಿಡಬಾರದೆಂದು ಎಚ್ಚರಿಕೆ ನೀಡಿ, ತಪ್ಪಿದ್ದಲ್ಲಿ ನಿಮ್ಮ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು ಎಂದು ಸೂಚಿಸಲಾಗಿದೆ. |

**ಸಂಖ್ಯೆ: ನಅಇ 97 ಬಿಬಿಎಲ್ 2023(ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ.